ಕೆಳಕಂಡ ತಾಂಡಾಗಳಿಗೆ ವಿದ್ಯುಚ್ಛಕ್ತಿ ಪೂರೈಸಲು ಕ್ರಮ ತೆಗೆದುಕೊಳ್ಳುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

1	ದೇವಜಾನಾಯ್ಕ	170	2.75 ಲಕ್ಷ ರೂ.
2	ಕೆ ಇಂಜಿರ್ನಲ್ಲಿ	129	0 42 ಲಕ್ಷ ರೂ.
3	ಹೊಲದಗೆರ	189	1.70 ಲಕ್ಷ ರೂ.
4	ತಗದ ತಕ್ಯಾ (ಫಕೀರಶಾನ ತಾಂಡಾ)	39	0 50 ಲಕ್ಷ ರೂ.

ವಿಷಯ :– ಮಂಜರಿ ಸೇತುವೆ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 506 (1186)

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಜರಿ ಸೇತುವೆಗಾಗಿ ಕೇಂದ್ರ ಸರ್ಕಾರದಿಂದ ಹಾಗೂ ರಾಜ್ಯ ಸರ್ಕಾರದಿಂದ ಎಷ್ಟು ಹಣ ಖರ್ಚು ಮಾಡಲಾಗಿದೆ ?

ಆ) ಮಂಜರಿ ಸೇತುವೆಯನ್ನು ಸಂಚಾರಕ್ಕೆ ಬಿಡುಗಡೆ ಮಾಡುವ ನಿಶ್ಚಿತ ದಿನಾಂಕ ಯಾವುದು ?

ಇ) ಮಂಜರಿ ಸೇತುವೆಗೆ ಎರಡೂ ಭಾಗದಲ್ಲಿ ಸಂಪರ್ಕ ರಸ್ತೆಯನ್ನು ನಿರ್ಮಿಸದೇ ಇರುವುದಕ್ಕೆ ಕಾರಣವೇನು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :–

ಅ) ಕೇಂದ್ರ ಸರ್ಕಾರದ ಸಾಲರೂಪದ ಧನ ಸಹಾಯದಿಂದ ಈ ಸೇತುವೆಗೆ ಇದುವರೆಗೆ ರೂ. 175.00 ಲಕ್ಷಗಳಷ್ಟು ಹಣವನ್ನು ಖರ್ಚು ಮಾಡಲಾಗಿದೆ.

ಆ) ಡಿಸೆಂಬರ್ 1992 ರಲ್ಲಿ ಸೇತುವೆಯನ್ನು ಸಂಚಾರಕ್ಕೆ ಬಿಡುಗಡೆ ಮಾಡುವ ನಿರೀಕ್ಷೆಯಿದೆ.

ಇ) ಸಣ್ಣ ಕೂಡು ರಸ್ತೆ ನಿರ್ಮಾಣಕ್ಕೆ (Short approaches) ಅವಕಾಶವಿದೆ 3 ಕಿ.ಮೀ. ಉದ್ದದ ಕೂಡುರಸ್ತೆಯನ್ನು 2.00 ಕೋಟಿ ರೂ. ಗಳ ಅಂದಾಜಿನಲ್ಲಿ ಕೇಂದ್ರ ರಸ್ತೆಯ ಯೋಜನೆಯಲ್ಲಿ ನಿರ್ಮಿಸುವ ಉದ್ದೇಶವಿದೆ.

ವಿಷಯ :– ಗುಬ್ಬಿ ಕ್ಷೇತ್ರದಲ್ಲಿ ಹೊಸ ಕೆರೆಗಳನ್ನು ಕಟ್ಟುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 507 (867)

ಶ್ರೀ ಜಿ. ಎಸ್. ಶಿವಸಂಜಪ (ಗುಬ್ಬಿ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.?

ಅ) ಗುಬ್ಬಿ ಕ್ಷೇತ್ರದಲ್ಲಿ 1984–85 ರಿಂದೀಚೆಗೆ ಎಷ್ಟು ಹೊಸ ಕೆರೆಗಳನ್ನು ಮಂಜೂರು ಮಾಡಲಾಗಿದೆ?

ಆ) ಇವುಗಳಲ್ಲಿ ಎಷ್ಟು ಕೆರೆಗಳನ್ನು ಕಟ್ಟಲು ಪ್ರಾರಂಭಿಸಲಾಗಿದೆ; ಪ್ರಾರಂಭಿಸಲಾಗಿದ್ದರೆ ಯಾವ ಹಂತಗಳಲ್ಲಿವೆ ? ಪೂರ್ಣ ವಿವರ ನೀಡುವುದು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :–

ಅ) ಐದು ಹೊಸ ಕೆರೆಗಳನ್ನು ಮಂಜೂರು ಮಾಡಲಾಗಿದೆ.

ಆ) ಇವುಗಳಲ್ಲಿ ಐದು ಕೆರೆಗಳನ್ನು ಕಟ್ಟಲು ಪ್ರಾರಂಭಿಸಲಾಗಿದ್ದು ಎರಡು ಕೆರೆಗಳ ಕಾಮಗಾರಿಗಳು ಮುಗಿದಿವೆ. ಇನ್ನು ಮೂರು ಕೆರೆಗಳ ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿವೆ. ವಿವರಗಳು ಕೆಳಗಿನಂತಿವೆ :

ಕೆರೆಯ ಹೆಸರು	ಕೆಲಸದ ಹಂತ
1) ಮುಚ್ಚವೀರನ ಹಳ್ಳಿ ಬಳಿ ಹೊಸಕೆರೆ ನಿರ್ಮಾಣ ಅಂದಾಜು ವೆಚ್ಚ ರೂ. 24.294 ಲಕ್ಷ (ಸಣ್ಣ ನೀರಾವರಿ ವಲಯ)	ಕೆಲಸ ಪೂರ್ಣಗೊಂಡಿದೆ.
2) ಕುನ್ನಘಟ್ಟದ ಹತ್ತಿರ ಹೊಸಕೆರೆ ನಿರ್ಮಾಣ–ವೆಚ್ಚ ರೂ. 3.6 ಲಕ್ಷ (ಜಿಲ್ಲಾ ಪರಿಷತ್ ಕಾಮಗಾರಿ)	ಕೆಲಸ ಪೂರ್ಣಗೊಂಡಿದೆ.
3) ಗೋಪಾಲಪುರದ ಹತ್ತಿರ ಹೊಸ ಕೆರೆ ನಿರ್ಮಾಣ ಅಂದಾಜು ವೆಚ್ಚ ರೂ. 2.46 ಲಕ್ಷ (ಜಿಲ್ಲಾ ಪರಿಷತ್ ಕಾಮಗಾರಿ)	ಕೆಲಸ ಪ್ರಗತಿಯಲ್ಲಿದೆ. ಏರಿ ಮತ್ತು ತೂಬಿನ ಉಳಿದ ಕೆಲಸ ಮಾಡಬೇಕಾಗಿದೆ.

4) ಬೊಮ್ಮರಸನಹಳ್ಳಿ ಹತ್ತಿರ ಹೊಸ ಕೆರೆ ನಿರ್ಮಾಣ ಅಂದಾಜು ವೆಚ್ಚ ರೂ. 3.76 ಲಕ್ಷ (ಜಿಲ್ಲಾ ಪರಿಷತ್ ಕಾಮಗಾರಿ)	ಕೆಲಸ ಪ್ರಗತಿಯಲ್ಲಿದೆ. ಹಳ್ಳದ ಭಾಗದ ಮತ್ತು ಎಡ ಭಾಗದ ಏರಿ ಒಂದು ತೂಬು ಮತ್ತು ಕೋಡಿ ಕೆಲಸ ಮಾಡಬೇಕಾಗಿದೆ.
5) ಮಾರಶೆಟ್ಟಿ ಹತ್ತಿರ ಹೊಸಕೆರೆ ನಿರ್ಮಾಣ ಅಂದಾಜು ವೆಚ್ಚ ರೂ. 4.93 ಲಕ್ಷ (ಜಿಲ್ಲಾ ಪರಿಷತ್ ಕಾಮಗಾರಿ)	ಕೆಲಸ ಪ್ರಗತಿಯಲ್ಲಿದೆ. ಹಳ್ಳದ ಭಾಗ, ಎಡಭಾಗದ ಏರಿ, ತೂಬು, ಕೋಡಿ ಕೆಲಸ ಮಾಡಬೇಕಾಗಿದೆ.

ವಿಷಯ :– ಕೈಮಗ್ಗದ ನಿರ್ದೇಶನಾಲಯದ ಬಗೆಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 508 (847)

ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) :– ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಕೈಮಗ್ಗ ನಿರ್ದೇಶನಾಲಯವನ್ನು ಯಾವ ವರ್ಷದಲ್ಲಿ ಸ್ಥಾಪಿಸಲಾಯಿತು ಮತ್ತು ಇಲ್ಲಿಯವರೆಗೆ ಅದು ಕೈಮಗ್ಗ ಕ್ಷೇತ್ರಕ್ಕೆ ಸಲ್ಲಿಸಿದ ಕಾರ್ಯಕ್ರಮಗಳೇನು ?

ಆ) ಗಣನೀಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿಲ್ಲದ ನಿರ್ದೇಶನಾಲಯದ ಬಗ್ಗೆ ಕೈಮಗ್ಗ ಕ್ಷೇತ್ರದವರಿಗೆ ಅರಿವಿಲ್ಲದ ರೀತಿಯಲ್ಲಿ ಈ ನಿರ್ದೇಶನಾಲಯವು ನಿಷ್ಕ್ರಿಯವಾಗಿರುವುದು ನಿಜವೇ ? ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಇ) ಕೈಮಗ್ಗ ನಿರ್ದೇಶನಾಲಯದ ಹೊಣೆ ಮತ್ತು ಜವಾಬ್ದಾರಿಗಳಿಗನುಗುಣವಾಗಿ ಅದು ಕೈಮಗ್ಗ ಕ್ಷೇತ್ರಕ್ಕೆ ಹಮ್ಮಿಕೊಂಡ ಕಾರ್ಯಕ್ರಮಗಳೇನು ಅವುಗಳಲ್ಲಿ ಯಾವುದನ್ನು ಕಾರ್ಯಗತಗೊಳಿಸಲಾಗಿದೆ?

ಈ) ಕೈಮಗ್ಗ ನಿರ್ದೇಶನಾಲಯವು ಸಕ್ರಿಯವಾಗಿ ಕಾರ್ಯ ನಿರ್ವಹಿಸುವಂತೆ ಇನ್ನಾದರೂ ಸರ್ಕಾರದವರು ಕ್ರಮ ಕೈಕೊಳ್ಳುವರೇ ?

ಶ್ರೀ ನಸೀರ್ ಅಹ್ಮದ (ಸಣ್ಣ ಪ್ರಮಾಣದ ಕೈಗಾರಿಕೆಗಳ ಸಚಿವರು) :–

ಅ) ಸರ್ಕಾರಿ ಆದೇಶ ಸಂಖ್ಯೆ ಸಿಐ/285/ಐಸಿಎಸ್ 86 ದಿ. 3–6–1988ರಲ್ಲಿ ಕರ್ನಾಟಕದಲ್ಲಿ ಒಂದು ಪ್ರತ್ಯೇಕವಾದ ಕೈಮಗ್ಗ ಮತ್ತು ಜವಳಿ ನಿರ್ದೇಶನಾಲಯವನ್ನು ಸ್ಥಾಪಿಸಲು ಆದೇಶ ಹೊರಡಿಸಲಾಗಿದೆ.

ಕೈಮಗ್ಗ ಮತ್ತು ಜವಳಿ ನಿರ್ದೇಶನಾಲಯದಲ್ಲಿ ಹೊಸದಾಗಿ ಸೃಷ್ಟಿಸಲಾದ ಅಪರ ಕೈಗಾರಿಕಾ ಅಭಿವೃದ್ಧಿ ಆಯುಕ್ತರು ಮತ್ತು ನಿರ್ದೇಶಕರು ಕೈಮಗ್ಗ ಮತ್ತು ಜವಳಿ ನಿರ್ದೇಶನಾಲಯ, ಈ ಹುದ್ದೆಗೆ ಅಧಿಕಾರಿಯನ್ನು ನೇಮಕಾತಿ ಮಾಡಿಲ್ಲದ ಕಾರಣ ಈ ನಿರ್ದೇಶನಾಲಯವು ಪ್ರತ್ಯೇಕವಾಗಿ ಕಾರ್ಯನಿರ್ವಹಿಸುತ್ತಿಲ್ಲ.

ಆ) ಹೌದು. ಹೊಸದಾಗಿ ಸೃಷ್ಟಿಸಲಾದ ಕೈಮಗ್ಗ ಮತ್ತು ಜವಳಿ ನಿರ್ದೇಶನಾಲಯವು ತನ್ನ ಕಾರ್ಯವನ್ನು ಪ್ರಾರಂಭಿಸಿರುವುದಿಲ್ಲ. ಆದರೆ; ಕೈಮಗ್ಗ ಮತ್ತು ಜವಳಿ ನಿರ್ದೇಶನಾಲಯಕ್ಕೆ ಸಂಬಂಧಿಸಿದ ಕಾರ್ಯಯೋಜನೆಗಳನ್ನು ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯವೇ ಜಾರಿಗೊಳಿಸುತ್ತಿದೆ.

ಇ) ಉದ್ಭವಿಸುವುದಿಲ್ಲ. ಹೊಸದಾಗಿ ಸೃಷ್ಟಿಸಲಾದ ನಿರ್ದೇಶನಾಲಯವು ಕಾರ್ಯಾರಂಭ ಮಾಡಬೇಕಾಗಿದ್ದು ಅದರ ಕಾರ್ಯವ್ಯಾಪ್ತಿಯು ರಾಜ್ಯದಲ್ಲಿರುವ ವಿದ್ಯುತ್ ಚಾಲಿತ ಮಗ್ಗಗಳು ಮತ್ತು ಜವಳಿ ಉದ್ಯಮದ ವಿವಿಧ ಸಮಸ್ಯೆಗಳನ್ನು ಪರಿಹರಿಸುವುದು ಮತ್ತು ನೇಕಾರರಿಗೆ ಉತ್ತಮ ಅವಕಾಶಗಳನ್ನು ಒದಗಿಸುವುದಾಗಿರುತ್ತದೆ. ಆದರೆ, ಈ ಕಾರ್ಯಕ್ರಮಗಳನ್ನು ಸದ್ಯಕ್ಕೆ ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯವೇ ಜಾರಿಗೊಳಿಸುತ್ತದೆ.

ಈ) ಹೌದು. ಆದಷ್ಟು ಬೇಗನೆ ಕ್ರಮ ಕೈಗೊಳ್ಳಲಾಗುವುದು.